SRI RAMAKRISHNA VIDYA KENDRA
SHIVANAHALLI

ತರಗತಿ : 7 ನೇ ತರಗತಿ | ವಿಷಯ ಸಮಾಜ ವಿಜ್ಞಾನ
ದಿನಾಂಕ : | ವಿದ್ಯಾರ್ಥಿಯ ಹೆಸರು :

**ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಸರಿಯಾಗಿ ಗಮನಿಸಿ ಓದು.**

**ಆಸ್ಟ್ರೇಲಿಯ ಖಂಡವು ಪೂರ್ಣವಾಗಿ** ದಕ್ಷಿಣ ಮತ್ತು ಪೂರ್ವ ಭೂಗೋಳಾರ್ಧದಲ್ಲಿದೆ. ಒಂದು ದೇಶಹಾಗೂ ಖಂಡ. ಸುತ್ತಲೂ ಸಾಗರಜಲದಿಂದ ಆವೃತವಾಗಿದ್ದು ಇಡೀ ಖಂಡವೇ ಒಂದು ಬೃಹತ್ ದ್ವೀಪದಂತಿದೆ. ಇದರ ಸ್ಥಳ ನಿರ್ದೇಶ ಹೀಗಿದೆ : 113º90–153º390, ಪೂರ್ವರೇ; 10º410–43º390, ದ.ಅ. ವಿಸ್ತೀರ್ಣ 76,86,850 ಚ.ಕಿಮೀ. ಜನಸಂಖ್ಯೆ 19,855,288 (2006). ರಾಜಧಾನಿ ಕ್ಯಾನ್ಬೆರ 353,149 (2001). ಹಿಂದೂ ಮಹಾಸಾಗರ ಮತ್ತು ಪೆಸಿಫಿಕ್ ಸಾಗರಗಳ ನಡುವೆ ಇದೆ. ಮಕರ ಸಂಕ್ರಾಂತಿ ವೃತ್ತವು ಹೆಚ್ಚು ಕಡಿಮೆ ಈ ಖಂಡದ ಮಧ್ಯ ಭಾಗದಲ್ಲಿ ಹಾದು ಹೋಗಿದೆ.ಅಂದರೆ ಇದರ ವಿಸ್ತಾರ ಅಮೆರಿಕ ಸಂಯುಕ್ತ ಸಂಸ್ಥಾನದಷ್ಟಾಗುತ್ತದೆ. ಸಮುದ್ರತೀರ 19,536 ಕಿಮೀ ಉದ್ದವಾಗಿದೆ. ನಿಸ್ಸಂದೇಹವಾಗಿ ಇದೊಂದು ಅಡಕವಾದ ಭೂಭಾಗ. ಇದರ ಈ ವೈಶಿಷ್ಟ್ಯ, ಮೇಲ್ಮೈಲಕ್ಷಣ ಮತ್ತು ಅಕ್ಷಾಂಶರೀತ್ಯಾ ಇದರ ಸ್ಥಾನ, ಇವೆಲ್ಲ ಇದರ ವಾಯುಗುಣವನ್ನು ನಿಯಂತ್ರಿಸುತ್ತವೆ. ಈ ಖಂಡದ ಭೌಗೋಳಿಕ ಲಕ್ಷಣ ನಿರ್ಣಯವಾಗಿರುವುದು ಈ ಅಂಶಗಳಿಂದ. ಆಸ್ಟ್ರೇಲಿಯ ಎಂಬ ಹೆಸರು 'ಆಸ್ಟ್ರಲ' ಎಂಬ ಲ್ಯಾಟಿನ್ ಶಬ್ದದಿಂದ ಬಂದದ್ದು.

**ಮೇಲಿನ ಮಾಹಿತಿಯ ಸಹಾಯದಿಂದ ಕೆಳಗಿನ ಬಿಟ್ಟಸ್ಥಳ ಮತ್ತು ಪ್ರಶ್ನೆಗಳಿಗೆ ಉತ್ತರಿಸು.**

**ಬಿಟ್ಟಸ್ಥಳ ಭರ್ತಿ ಮಾಡಿ.**

೧. ಆಸ್ಟ್ರೇಲಿಯ ಖಂಡವು ಪೂರ್ಣವಾಗಿ _______ಗೋಳಾರ್ಧದಲ್ಲಿದೆ.

೨. ಆಸ್ಟ್ರೇಲಿಯದ ರಾಜಧಾನಿ ______.

೩. ಆಸ್ಟ್ರೇಲಿಯ ಖಂಡದ ಮಧ್ಯ ಭಾಗದಲ್ಲಿ ಹಾದು ಹೋಗಿರುವ ಅಕ್ಷಾಂಶ ______

**ಪ್ರಶ್ನೆಗಳು .**

೧. ಆಸ್ಟ್ರೇಲಿಯ ಎಂಬ ಹೆಸರು ಹೇಗೆ ಬಂದಿದೆ ?

೨. ಆಸ್ಟ್ರೇಲಿಯ ಖಂಡವನ್ನು ಏಕೆ ಒಂದು ಬೃಹತ್ ದ್ವೀಪ ಎಂದು ಕರೆಯುತ್ತಾರೆ ?

೩. ಆಸ್ಟ್ರೇಲಿಯದ ಭೌಗೋಳಿಕ ಲಕ್ಷಣಗಳು ಯಾವ ಅಂಶಗಳಿಂದ ನಿರ್ಣಯವಾಗುತ್ತದೆ?

೪. ಆಸ್ಟ್ರೇಲಿಯ ಖಂಡವು ಯಾವ ಎರಡು ಸಾಗರಗಳ ನಡುವೆ ಇದೆ ?